ಈ ಲೇಖನದ ವಿಷಯಾನುಕ್ರಮಣಿಕೆ

ಪಿಂಡವಿಸರ್ಜನೆಯ ಕ್ರಮಗಳು 2

ಅಗ್ನಿಯಲ್ಲಿ ಪಿಂಡವಿಸರ್ಜನೆ 4

ಗೋವುಗಳಿಗೆ ಸಮರ್ಪಣೆ 5

ನದಿಯ ನೀರಿನಲ್ಲಿ ಪಿಂಡವಿಸರ್ಜನೆ 6

ಕಾಗೆಗಳಿಗೆ ನೀಡುವದು 7

ಆಕಾಶದಲ್ಲಿ ವಿಸರ್ಜನೆ 8

ಊಟಕ್ಕಿಂತ ಮುಂಚೆಯೇ ಪಿಂಡವಿಸರ್ಜನೆಯಾಗಬೇಕು 9

## ಪಿಂಡವಿಸರ್ಜನೆಯ ಕ್ರಮಗಳು

ಈ ದಿವಸ ಬ್ರಾಹ್ಮಣರೆಲ್ಲ ಹಳ್ಳಿಗಳನ್ನು ಬಿಟ್ಟು ಪಟ್ಟಣ ಸೇರಿದ್ದಾರೆ. ಪಟ್ಟಣಗಳಲ್ಲಿನ ಬೆಂಕಿಪೊಟ್ಟಣದಂತಹ ಮನೆಗಳು. ಕೆಲವರ ಮನೆ ವಿಶಾಲವಾಗಿದ್ದರೂ ಶ್ರಾದ್ಧ, ದೇವರಪೂಜೆಗಳಿಗೆ ಅನುಕೂಲವಿರುವದಿಲ್ಲ. ಹೀಗಾಗಿ ಅವಶ್ಯವಾಗಿ ಅನುಷ್ಠಾನ ಮಾಡಬೇಕಾದ ಧರ್ಮಗಳೂ ಸಹ ಕ್ಷೀಣಿಸುತ್ತಿವೆ.

ಶ್ರಾದ್ಧಕ್ಕೆ ಮನೆಯೇ ಸರ್ವಶ್ರೇಷ್ಠವಾದ ಪ್ರದೇಶ. ಹೀಗಾಗಿ ಸಾಂವತ್ಸರಿಕ ಶ್ರಾದ್ಧವನ್ನಾದರೂ ಪ್ರಯತ್ನಪಟ್ಟು ಮನೆಯಲ್ಲಿಯೇ ಮಾಡಬೇಕು. ತೀರ್ಥಶ್ರಾದ್ಧವನ್ನು ತೀರ್ಥಕ್ಷೇತ್ರಗಳಲ್ಲಿ.

ಮಗ ತಾನು ವಾಸವಿರುವ ಮನೆಯಲ್ಲಿ ಮಾಡುವ ಶ್ರಾದ್ಧ, ಸೊಸೆ ಮಾಡುವ ಶ್ರಾದ್ಧದ ಅಡಿಗೆ ಎರಡೂ ಸಹ ಮಹಾಫಲಪ್ರದವಾದದ್ದು[1]. ಆದರೆ, ಈ ದಿವಸಗಳಲ್ಲಿ ಮಠಗಳಲ್ಲಿ ಶ್ರಾದ್ಧ, ಅಡಿಗೆಯವರ ಅಡಿಗೆಯಾಗಿದೆ. ಧರ್ಮ ದಿನದಿಂದ ದಿನಕ್ಕೆ ಕ್ಷೀಣಿಸುತ್ತಿದೆ.

ಹೀಗೆ ಶ್ರಾದ್ಧದ ನಿಯಮಗಳು ಸಂಕುಚಿತವಾಗುತ್ತಿವೆ. ಹಾಗೆಯೇ ಹೊಸ ಸಮಸ್ಯೆಗಳೂ ಹುಟ್ಟಿಕೊಳ್ಳುತ್ತಿವೆ. ಪ್ರಧಾನವಾದ ಸಮಸ್ಯೆ ಪಿಂಡವಿಸರ್ಜನೆಯದು. ಮಠಗಳಲ್ಲಿ ಹತ್ತಾರು ಜನ — ಮಹಾಲಯದ ಸಂದರ್ಭದಲ್ಲಿ ನೂರಾರು ಜನ — ಒಟ್ಟಿಗೇ ಶ್ರಾದ್ಧ ಮಾಡುತ್ತಾರೆ. ಕೆಲವು ಮಠದವರು ಭೂಗತ ಮಾಡಿಸುತ್ತಾರೆ. ಆದರೆ ಕಾಂಕ್ರೀಟಿನ ಕಾಡಿನಲ್ಲಿ ಅದೂ ಸಹ ಸಮಸ್ಯೆಯಾಗುತ್ತಲೇ ಇದೆ.

[1] ಶ್ರಾದ್ಧದಲ್ಲಿ ದರ್ಭಬ್ರಾಹ್ಮಣರಿಗೆ ಏನು ಅಡಿಗೆಯನ್ನು ಬಡಿಸುತ್ತೇವೆ, ಆ ಅಡಿಗೆಯನ್ನು ಸೊಸೆ (ಕರ್ತೃವಿನ ಹೆಂಡತಿ) ಮಾಡುವದು ಸರ್ವೋತ್ತಮ ಪಕ್ಷ. ಸಮಾರಾಧನೆಗೆ ಬೇಕಾದರೆ ಅಡಿಗೆಯವರನ್ನು ಕರೆಯಿಸಿ ಮಾಡಿಸಬಹುದು. )

ವಾಯುಪುರಾಣದಲ್ಲಿ ಪಿಂಡವಿಸರ್ಜನೆಯ ಕ್ರಮವನ್ನು ತಿಳಿಸಲಾಗಿದೆ. ಇದರಲ್ಲಿ ಅನುಕೂಲವಾದ ಯಾವುದೇ ಕ್ರಮವನ್ನಾದರೂ ನೀವು ಅನುಸರಿಸಬಹುದು.

## ಅಗ್ನಿಯಲ್ಲಿ ಪಿಂಡವಿಸರ್ಜನೆ

**ಪಿಂಡಮಗ್ನೌ ಸದಾ ದದ್ಯಾತ್**
**ಗೋತ್ರಾರ್ಥೀ ಸತತಂ ನರಃ ।**

ಪಿಂಡಗಳನ್ನು ಬೆಂಕಿಯಲ್ಲಿ ಹಾಕುವದು ಅತ್ಯುತ್ತಮಪಕ್ಷ. ಬೆಂಕಿಯನ್ನು ಜ್ವಲಂತವಾಗಿ ಉರಿಸಿ ಅದರೊಳಗೆ ಪಿಂಡಗಳನ್ನು ಹಾಕಿ ಅದು ಪೂರ್ಣವಾಗಿ ಸುಟ್ಟುಹೋಗುವ ಹಾಗೆ ನೋಡಿಕೊಳ್ಳಬೇಕು. ಈ ರೀತಿಯಾಗಿ ಅಗ್ನಿಯಲ್ಲಿ ಪಿಂಡವಿಸರ್ಜನೆ ಮಾಡುವದರಿಂದ ಕುಲದ ಅಭಿವೃದ್ಧಿಯಾಗುತ್ತದೆ. ಪ್ರಾಯಃ ಪಟ್ಟಣದಲ್ಲಿರುವ ಜನರಿಗೆ ಇದು ಬಹಳ ಅನುಕೂಲವಾಗುತ್ತದೆ.

## ಗೋವುಗಳಿಗೆ ಸಮರ್ಪಣೆ

**ಉತ್ತಮಾಂ ಗತಿಮನ್ವಿಚ್ಛನ್**
**ಗೋಭ್ಯೋ ನಿತ್ಯಂ ಪ್ರಯಚ್ಛತಿ ।**

ತನ್ನ ಪಿತೃಗಳಿಗೆ ಶ್ರೇಷ್ಠಗತಿಯಾಗಲಿ ಎಂಬ ಅಪೇಕ್ಷೆಯಿದ್ದಲ್ಲಿ ಗೋವುಗಳಿಗೆ ನೀಡಬೇಕು. **ಆದರೆ, ಒಂದು ಅಂಶವನ್ನು ಎಲ್ಲರೂ ಗಮನಿಸತಕ್ಕದ್ದು. ಹಸುಗಳಿಗೆ ಅನ್ನ ತಿನ್ನಿಸುವದು ಅದರ ಆರೋಗ್ಯಕ್ಕೆ ಅಷ್ಟು ಒಳ್ಳೆಯದಲ್ಲ. ಹೀಗಾಗಿ, ಒಂದು ಗೋವಿಗೆ ಒಂದು ದಿವಸಕ್ಕೆ ಮೂರು ಪಿಂಡಗಳನ್ನು ನೀಡಿದಲ್ಲಿ ಏನೂ ತೊಂದರೆಯಿಲ್ಲ. ಆದರೆ, ಮಠಗಳಲ್ಲಿರುವ ಹಸುಗಳಿಗೆ ನೂರಾರು ಪಿಂಡಗಳನ್ನು ತಿನ್ನಿಸುವದರಿಂದ ಅವುಗಳ ಆರೋಗ್ಯಕ್ಕೆ ತುಂಬ ತೊಂದರೆಯಾಗುತ್ತದೆ. ಹೀಗಾಗಿ, ನಮ್ಮ ಧರ್ಮದ ಆಚರಣೆಯಿಂದ ಗೋವಿನಂತಹ ಶ್ರೇಷ್ಠ ಪ್ರಾಣಿಗೆ ತೊಂದರೆಯಾಗಬಾರದು.** ಅದಕ್ಕಾಗಿ ಆ ಗೋವಿಗೆ ಆ ದಿವಸದಲ್ಲಿ ಒಂದೇ ಬಾರಿ ನೀಡುತ್ತಿರುವದು ಖಚಿತವಾದಲ್ಲಿ ಮಾತ್ರ ತಿನ್ನಲು ನೀಡಬಹುದು. ಇಲ್ಲದಿದ್ದರೆ ಬೇಡ. ಮಹಾಲಯದಲ್ಲಿ ಪಿಂಡಗಳ

ಸಂಖ್ಯೆ ಅಧಿಕವಾಗಿರುವದರಿಂದ ಒಂದೇ ಗೋವಿಗೆ ಅಷ್ಟನ್ನೂ ತಿನ್ನಿಸುವದು ಬೇಡ.

## ನದಿಯ ನೀರಿನಲ್ಲಿ ಪಿಂಡವಿಸರ್ಜನೆ

**ಆಜ್ಞಾಂ ಪ್ರಜ್ಞಾಂ ಯಶಃ ಕೀರ್ತಿಂ**
**ಅಪ್ಸು ನಿತ್ಯಂ ನಿಧಾಪಯೇತ್[2] ।**

ತನ್ನ ಮಕ್ಕಳು, ಶಿಷ್ಯರು, ಭೃತ್ಯರು ತನ್ನ ಮಾತನ್ನು ಕೇಳಬೇಕೆಂಬ ಅಪೇಕ್ಷೆ ಇದ್ದಲ್ಲಿ, ಅವರು ಹದ್ದು ಮೀರಿ ವರ್ತಿಸುತ್ತಿದ್ದು ಅವರನ್ನು ಸರಿದಾರಿಗೆ ತರಬೇಕಾದ್ದಲ್ಲಿ, ಅವರನ್ನು ಸರಿದಾರಿಗೆ ನಡೆಸುವ ತಿಳುವಳಿಕೆ ನಮಗೆ ಬರಬೇಕಾದ್ದಲ್ಲಿ, ಉತ್ತಮವಾದ ಜ್ಞಾನ, ಯಶಸ್ಸು ಕೀರ್ತಿಗಳ[3] ಅಪೇಕ್ಷೆಯಿದ್ದಲ್ಲಿ ಪಿಂಡಗಳನ್ನು ನದಿಯ, ಕೆರೆಗಳ ನೀರಿನಲ್ಲಿ ವಿಸರ್ಜಿಸಬೇಕು. ನೀರಿನಲ್ಲಿ ವಿಸರ್ಜಿಸುವದರಿಂದ ಪಿತೃದೇವತೆಗಳು ಪ್ರಸನ್ನರಾಗಿ ಈ ರೀತಿಯ ಅನುಗ್ರಹವನ್ನು ಮಾಡುತ್ತಾರೆ.

---

[2] ಹಿಂದಿನ ಪಾದದಲ್ಲಿರುವ ಅನ್ವಿಚ್ಛನ್ ಎನ್ನುವದರ ಜೊತೆ ಅನ್ವಯ.

[3] ನಾವಿಲ್ಲದಿರುವಾಗಲೂ ಜನ ನಮ್ಮನ್ನು ಮನಃಪೂರ್ವಕವಾಗಿ ಹೊಗಳಿದರೆ ಅದು ಯಶಸ್ಸು, ನಮ್ಮ ಎದುರಿನಲ್ಲಿಯೇ ಜನರು ಮನತುಂಬಿ ಪ್ರಾಮಾಣಿಕವಾಗಿ ಹೊಗಳಿದರೆ ಅದು ಕೀರ್ತಿ.

ತೀರ್ಥಶ್ರಾದ್ಧ ಮಾಡುವವರು ಆಲ್ಲಲ್ಲಿನ ತೀರ್ಥದಲ್ಲಿಯೇ ಪಿಂಡಗಳನ್ನು ವಿಸರ್ಜಿಸಬೇಕು ಎಂದು ವಿಷ್ಣುಧರ್ಮೋತ್ತರದಲ್ಲಿ ನಿಯಮವನ್ನು ಹೇಳಿದ್ದಾರೆ — **"ತೀರ್ಥಶ್ರಾದ್ಧೇ ಸದಾ ಪಿಂಡಾನ್ ಕ್ಷಿಪೇತ್ ತೀರ್ಥೇ ಸಮಾಹಿತಃ"** ಎಂದು.

## ಕಾಗೆಗಳಿಗೆ ನೀಡುವದು

> **ಪ್ರಾರ್ಥಯೇದ್ ಧೀರ್ಘಮಾಯುಶ್ಚ**
> **ವಾಯಸೇಭ್ಯಃ ಪ್ರಯಚ್ಛತಿ ।**

ಕಾಕಪಿಂಡ ಎನ್ನುವದು ಪ್ರತ್ಯೇಕ. ಸತ್ತ ಹತ್ತನೆಯ ದಿವಸ ನೀಡುವಂತದ್ದು.

ಆದರೆ, ಎಲ್ಲ ಪಿಂಡಗಳನ್ನೂ ಕಾಗೆಗಳಿಗೆ ನೀಡುವ ಕ್ರಮವೂ ಇದೆ. ಪಿಂಡಗಳನ್ನು ಕಾಗೆಗಳಿಗೆ ತಿನ್ನಲು ನೀಡಿದರೆ ದೀರ್ಘಾಯುಷ್ಯ ಉಂಟಾಗುತ್ತದೆ.

## ಆಕಾಶದಲ್ಲಿ ವಿಸರ್ಜನೆ

**ಆಕಾಶಂ ಗಮಯೇದ್ ದಿಕ್ಷು**
**ಸ್ಥಿತೋ ವಾ ದಕ್ಷಿಣಾಮುಖಃ ।**
**ಪಿತೃಣಾಂ ಸ್ಥಾನಮಾಕಾಶಂ**
**ದಕ್ಷಿಣಾ ದಿಕ್ ತಥೈವ ಚ ॥**

ಇದೂ ಸಹ ಶ್ರೇಷ್ಠವಾದ ಕ್ರಮ. ಆದರೆ ಪಟ್ಟಣದಲ್ಲಿರುವವರಿಗೆ, ಅಥವಾ ಜನಜಂಗುಳಿಯಲ್ಲಿರುವವರಿಗೆ ಸಾಧ್ಯವೇ ಇಲ್ಲ.

**ಹರಿಯುವ  ನೀರಿನಲ್ಲಿ ಯಾವುದೇ ದಿಕ್ಕಿನಲ್ಲಾದರೂ ನಿಂತು ದಕ್ಷಿಣಕ್ಕೆ ಮುಖ ಮಾಡಿ ಪಿಂಡಗಳನ್ನು ಆಕಾಶಕ್ಕೆಸೆಯಬೇಕು. ಅದು ನೀರಿನಲ್ಲಿ ಬೀಳುತ್ತದೆ.**

ನೀರಿನಲ್ಲಿ ವಿಸರ್ಜನೆ ಮಾಡಬೇಕಾದರೆ ಪಿಂಡಗಳನ್ನು ನೀರಿನಲ್ಲಿ ಬಿಡಬೇಕು. ಆಕಾಶದಲ್ಲಿ ವಿಸರ್ಜನೆ ಮಾಡಬೇಕಾದರೆ ನೀರಿನಲ್ಲಿ ನಿಂತು ದಕ್ಷಿಣಕ್ಕೆ ಮುಖ ಮಾಡಿ ಆಕಾಶಕ್ಕೆಸೆಯಬೇಕು.

ಇದನ್ನು ನೆಲದ ಮೇಲೆ ನಿಂತು ಮಾಡುವದು ಅಷ್ಟು ಪ್ರಶಸ್ತವಲ್ಲ. ಕಾರಣ, ಪಿಂಡ ಕೆಳಗೆ ಬಿದ್ದ ನಂತರ ಅದನ್ನು ನಾಯಿ ಮುಂತಾದ ಪ್ರಾಣಿಗಳು ತಿನ್ನುವ ಸಾಧ್ಯತೆಯಿರುತ್ತದೆ, ಜನರು ತುಳಿಯುವ ಸಾಧ್ಯತೆಯಿರುತ್ತದೆ. ಹೀಗಾಗಿ ನೀರಿನಲ್ಲಿಯೇ ನಿಂತು ಆಕಾಶದಲ್ಲಿ ವಿಸರ್ಜನೆ ಮಾಡಬೇಕು. ನೆಲದ ಮೇಲೆ ನಿಂತು ಆಕಾಶಕ್ಕೆಸೆಯಬಾರದು.

## ಊಟಕ್ಕಿಂತ ಮುಂಚೆಯೇ ಪಿಂಡವಿಸರ್ಜನೆಯಾಗಬೇಕು

ಇಂದಿನ ದಿವಸಗಳಲ್ಲಿ ಶ್ರಾದ್ಧ ಮುಗಿದ ಬಳಿಕ ಪಿಂಡಗಳನ್ನೆಲ್ಲ ಒಂದೆಡೆ ಇಟ್ಟು ಮಧ್ಯಾಹ್ನದ ನಂತರ ತೆಗೆದುಕೊಂಡು ಹೋಗಿ ಬಿಸಾಡುತ್ತಾರೆ. ಅತ್ಯಂತ ಅಶಾಸ್ತ್ರೀಯವಾದ ಕ್ರಮವಿದು.

ಪಿಂಡವಿಸರ್ಜನೆಯಾಗದೆ ಕರ್ತೃ ಊಟ ಮಾಡುವ ಹಾಗಿಲ್ಲ. ಹೀಗಾಗಿ ಶ್ರಾದ್ಧ ಮುಗಿದ ಬಳಿಕ ಪಿಂಡಗಳನ್ನು ಮೇಲೆ ಹೇಳಿದ ರೀತಿಯಲ್ಲಿ — ಅಥವಾ ಭೂಗತವನ್ನಾದರೂ ಮಾಡಿ — ವಿಸರ್ಜಿಸಿ ಆ ನಂತರ ಕರ್ತೃ ಊಟ ಮಾಡಬೇಕು.

ಶ್ರದ್ಧೆಯಿಂದ ಮಾಡಿದ ಶ್ರಾದ್ಧ ಲೋಪವಾಗದ ಹಾಗೆ ನೋಡಿಕೊಳ್ಳಿ. ಪಿಂಡ ಕಟ್ಟಿ ಪಿತೃಗಳಿಗೆ ನೀಡುವದು ಎಷ್ಟು ಮುಖ್ಯವೋ ಅಷ್ಟೇ ಮುಖ್ಯ ಅದನ್ನು ಶಾಸ್ತ್ರೀಯವಾದ ಕ್ರಮದಲ್ಲಿ ವಿಸರ್ಜಿಸುವದು.

ಆದಷ್ಟು ಬೇರೆಯ ಕಡೆಯಲ್ಲಿ ಶ್ರಾದ್ಧ ಮಾಡುವ ಪರಿಪಾಠವನ್ನು ಬಿಡಬೇಕು.  ಜನ್ಮ ನೀಡಿ, ಮನೆಯಲ್ಲಿ ಸಾಕಿ ಸಲಹಿದ ತಂದೆ ತಾಯಿಗಳಿಗೆ ಮನೆಯಲ್ಲಿಯೇ ಶ್ರಾದ್ಧವನ್ನು ಮಾಡುವದು ಸರ್ವಶ್ರೇಷ್ಠ.

ತೀರ ಒಂದು ಶ್ರಾದ್ಧವನ್ನೂ ಮಾಡಲಾಗದಂತಹ ಮನೆಯಲ್ಲಿ, ಪ್ರದೇಶದಲ್ಲಿ ವಾಸ ಮಾಡುವದು ಬ್ರಾಹ್ಮಣರಿಗೆ ಭೂಷಣವಲ್ಲ.

**ಹಳ್ಳಿಗಳಲ್ಲಿ ವಾಸ ಮಾಡುವದರಿಂದ ಧರ್ಮಾಚರಣೆ ಮಾಡಲು ಸಾಧ್ಯ, ದೇಶದ ಅಭಿವೃದ್ಧಿಗೆ ಒಂದು ಕೈ ಜೋಡಿಸಿದಂತಾಗುತ್ತದೆ. ಯೋಚನೆ ಮಾಡಿ.**

— ವಿಷ್ಣುದಾಸ ನಾಗೇಂದ್ರಾಚಾರ್ಯ

# <u>ವಿಶ್ವನಂದಿನಿಗೆ ಸಜ್ಜನರ ಸಹಾಯದ ಅಗತ್ಯವಿದೆ</u>

ಪರಮಾತ್ಮನನ್ನು ತಿಳಿಸಿಕೊಡುವ ದಿವ್ಯಗ್ರಂಥಗಳನ್ನು ತಿಳಿಯಾದ ಭಾಷೆಯಲ್ಲಿ ಸಜ್ಜನರಿಗೆ ತಲುಪಿಸಲು ವಿಶ್ವನಂದಿನಿ 10000 ಗಂಟೆಗಳ ಉಪನ್ಯಾಸಗಳ ಗುರಿಯನ್ನೂ, 30000 ಪುಟಗಳ ಲೇಖನದ ಗುರಿಯನ್ನೂ ಹೊಂದಿದೆ.

ವಿಶ್ವನಂದಿನಿಯ ಎಲ್ಲ ಉಪನ್ಯಾಸಗಳೂ, ಲೇಖನಗಳೂ ಪ್ರತಿಯೊಬ್ಬರಿಗೂ ಉಚಿತವಾಗಿ ಲಭ್ಯ.

ಈ ಬೃಹತ್ ಜ್ಞಾನಸತ್ರ ನಿಮ್ಮ ನೆರವಿಲ್ಲದೇ ಮುಂದುವರೆಯಲು ಸಾಧ್ಯವಿಲ್ಲ.

ಈ ಜ್ಞಾನಕಾರ್ಯಕ್ಕೆ ನೆರವು ನೀಡುವ ಸಜ್ಜನರು ಕೆಳಗಿನ ಖಾತೆಗೆ ಹಣವನ್ನು ವರ್ಗಾಯಿಸಬಹುದು

- **Account Name** **VISHWANANDINI**
- **Account Number** **35368588017**
- **Account Type** **Current Account**
- **Bank** **State Bank of India**
- **Branch** **T. Narasipura, Mysore**
- **IFSC** **SBIN0013233**

Please WhatsApp the transaction details to
**9901551491**

ಈಗಾಗಲೇ ನೆರವು ನೀಡಿದ, ನೀಡುತ್ತಿರುವ ಸಜ್ಜನರಿಗೆ
ನನ್ನ  ಮನಃಪೂರ್ವಕ ಕೃತಜ್ಞತೆಗಳು.

**ನೀವು ವಿಶ್ವನಂದಿನಿಯ ಖಾತೆಗೆ ಹಣವನ್ನು ವರ್ಗಾಯಿಸುವಾಗ**

**“ವಿಶ್ವನಂದಿನಿ ಗಮ್ಯ ತಲುಪಲಿ”**

**ಎಂದು ಗುರುದೇವತೆಗಳಗೆ,**
**ಶ್ರೀ ವೇದವ್ಯಾಸದೇವರಿಗೆ**
**ಪ್ರಾರ್ಥನೆ ಸಲ್ಲಿಸುವದನ್ನು ಮರೆಯಬೇಡಿ.**

ಸಜ್ಜನರ ಪ್ರಾರ್ಥನೆಯನ್ನು
ಶ್ರೀಹರಿ ಮನ್ನಿಸುತ್ತಾನೆ.

— ವಿಷ್ಣುದಾಸ ನಾಗೇಂದ್ರಾಚಾರ್ಯ

**Vishnudasa Nagendracharya**

No. 2, “Sri Madhwanuja Mandiram"
Kaveri Marga,  Hemmige Village,
Talakadu,  T Narasipura,
Mysore - 571122, Karnataka, India

nagendracharya@yahoo.co.in

WhatsApp:  9901 551 491